# ಅಭ್ಯರ್ಥಿಗಳಿಗೆ ಸೂಚನೆ

**2017ನೇ ಸಾಲಿನಲ್ಲಿ ವಿವಿಧ ಕೋರ್ಸುಗಳಿಗೆ ಸರ್ಕಾರವು ನಿಗದಿ ಪಡಿಸಿರುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಅಳವಡಿಸಿಕೊಂಡು, ಅಭ್ಯರ್ಥಿಗಳ ಮೆರಿಟ್ ಮತ್ತು ಅಭ್ಯರ್ಥಿಗಳು ದಾಖಲಿಸಿರುವ ಆಪ್ಷನ್ ಅನ್ನು ಆಧರಿಸಿ** ಸೀಟು ಹಂಚಿಕೆ ಮಾಡಲಾಗಿದೆ.

ಸೀಟು ಹಂಚಿಕೆಯ ಫಲಿತಾಂಶವನ್ನು ಅಭ್ಯರ್ಥಿಗಳು ಸಿಇಟಿ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ನಿಗದಿಪಡಿಸಿರುವ ನಾಲ್ಕು **CHOICE** ಗಳಲ್ಲಿ ಯಾವುದಾದರು ಒಂದು **CHOICE** ನ್ನು ಆಯ್ಕೆ ಮಾಡುವ ಮೊದಲು ಈ ಕೆಳಗಿನ ಅಂಶಗಳನ್ನು ಗಮನಿಸಲು ಸೂಚಿಸಿದೆ.

ಅ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಸೀಟು ಹಂಚಿಕೆಯನ್ನು ಕೈಗೊಳ್ಳಲಿದೆ. ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಅರ್ಹತೆಯನ್ನು ಹೊಂದಿದ್ದು ಆಸಕ್ತಿಯಿರುವ ಅಭ್ಯರ್ಥಿಗಳು ಸೂಕ್ತವಾದ ಆಯ್ಕೆಯ ತೀರ್ಮಾನವನ್ನು ಎಚ್ಚರಿಕೆಯಿಂದ ತೆಗೆದುಕೊಳ್ಳಬೇಕಾಗುತ್ತದೆ.

ಆ. ಅಭ್ಯರ್ಥಿಗಳು Engineering / Architecture / Agriculture / Veterinary ಸೀಟನ್ನು **CHOICE -2** ನೀಡಿ ತಮ್ಮೊಡನೆ ಇಟ್ಟುಕೊಂಡು ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಸೀಟು ಹಂಚಿಕೆಗೆ ಭಾಗವಹಿಸಬಹುದಾಗಿದೆ. ಅಂತಹ ಅಭ್ಯರ್ಥಿಗಳು ವೈದ್ಯಕೀಯ / ದಂತವೈದ್ಯಕೀಯ ಸೀಟನ್ನು ಹಂಚಿಕೆ ಮಾಡಿಕೊಂಡಲ್ಲಿ Engineering / Architecture / Agriculture / Veterinary ಸೀಟು ತಂತಾನೆ ರದ್ದಾಗುತ್ತದೆ.

ಇ. ಇಂತಹ ಸೀಟುಗಳನ್ನು ಮುಂದಿನ ಸುತ್ತಿನಲ್ಲಿ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು.

ಈ. ಆದ್ದರಿಂದ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗಿರುವ ಸೀಟುಗಳಿಗೆ ಯಾವುದೇ **CHOICE** ಅನ್ನು ಆಯ್ಕೆ ಮಾಡುವ ಮೊದಲು ಪ್ರತಿ **CHOICE** ನ ಪರಿಣಾಮವನ್ನು ಗಮನದಲ್ಲಿಟ್ಟುಕೊಂಡು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಉ. ಬ್ರೋಚರ್ ನಲ್ಲಿ ನೀಡಿರುವ ಮಾಹಿತಿಯನ್ನು ಓದಿ ಅರ್ಥ ಮಾಡಿಕೊಂಡು ಮುಂದಿನ ಸುತ್ತುಗಳಲ್ಲಿ ಭಾಗವಹಿಸಲು ನಿಗದಿಪಡಿಸಿರುವ ಅರ್ಹತೆ ಮತ್ತು ಮುಂದಿನ ಸುತ್ತುಗಳಲ್ಲಿ ಬರಬಹುದಾದ ಸೀಟುಗಳನ್ನು ಗಮನದಲ್ಲಿಟ್ಟುಕೊಂಡು ಪೋಷಕರ ಜೊತೆ ಚರ್ಚಿಸಿ ಸೂಕ್ತವಾದ **CHOICE** ಅನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ.

ಅಭ್ಯರ್ಥಿಗಳು **CHOICE** ಗಳನ್ನು ಆಯ್ಕೆ ಮಾಡಿಕೊಳ್ಳಲು, ಚಲನ್ ಅನ್ನು ಡೌನ್ ಲೋಡ್ ಮಾಡಿಕೊಳ್ಳಲು, ಬ್ಯಾಂಕಿನಲ್ಲಿ ಶುಲ್ಕ ಪಾವತಿ ಮಾಡಲು ಮತ್ತು ಪ್ರವೇಶ ಆದೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳಲು ಯಾವುದೇ ಸಹಾಯಕ ಕೇಂದ್ರಗಳಿಗೆ ಭೇಟಿ ನೀಡುವ ಅವಶ್ಯಕತೆ ಇರುವುದಿಲ್ಲ.

ಈ ಮೇಲಿನ ಎಲ್ಲಾ ಚಟುವಟಿಕೆಗಳಿಗೆ ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in** ಗೆ ಭೇಟಿ ನೀಡಲು ಕೋರಿದೆ.

**ಸಿಇಟಿ–2017 – ಮೊದಲ ಸುತ್ತು ಸೀಟು ಹಂಚಿಕೆ ಸೂಚನೆಗಳು**
**ದಿನಾಂಕ : 25–06–2017**

**2017ನೇ ಸಾಲಿನಲ್ಲಿ ವಿವಿಧ ಕೋರ್ಸುಗಳಿಗೆ ಸರ್ಕಾರವು ನಿಗದಿ ಪಡಿಸಿರುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಅಳವಡಿಸಿಕೊಂಡು, ಅಭ್ಯರ್ಥಿಗಳ ಮೆರಿಟ್ ಮತ್ತು ಅಭ್ಯರ್ಥಿಗಳು ದಾಖಲಿಸಿರುವ ಆಪ್ಷನ್ ಅನ್ನು ಆಧರಿಸಿ** ಸೀಟು ಹಂಚಿಕೆ ಮಾಡಲಾಗಿದೆ.

ಸೀಟು ಹಂಚಿಕೆಯ ಫಲಿತಾಂಶವನ್ನು ಅಭ್ಯರ್ಥಿಗಳು ಸಿಇಟಿ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ಅಭ್ಯರ್ಥಿಗಳಿಗೆ ಈ ಕೆಳಗೆ ವಿವರಿಸಿರುವಂತೆ ನಿರ್ಣಯಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ.

ಅ) ಸೀಟು ಹಂಚಿಕೆ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದೆ ಎಂದು ಖಚಿತಪಡಿಸಿ ಕೊಳ್ಳಬೇಕು. ತೃಪ್ತಿಕರವಾಗಿದ್ದಲ್ಲಿ, Choice-1 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಆ) ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದೆ ಆದರೆ ನನಗೆ ಇನ್ನೂ ಉತ್ತಮ ಸೀಟು ಬೇಕಾಗಿದೆ, ಆದ್ದರಿಂದ ನಾನು ಮುಂದಿನ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ನಿರ್ಣಯಿಸಿದರೆ Choice-2 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಇ) ಅಭ್ಯರ್ಥಿಯು ತಮಗೆ ಮೊದಲ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ಆದ್ದರಿಂದ ನಾನು ಮುಂದಿನ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ನಿರ್ಣಯಿಸಿದರೆ Choice-3 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಈ) ಅಭ್ಯರ್ಥಿಯು ತಮಗೆ ಮೊದಲ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ನನಗೆ ದೊರಕಿರುವ ಸೀಟು ಬೇಡ ಹಾಗೂ ನನಗೆ ಮುಂದಿನ ಸುತ್ತಿನಲ್ಲೂ ಸಹ ಯಾವುದೂ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ, ನಾನು ಬೇರೆ ಸಂಸ್ಥೆಯಿಂದ ಸೀಟು ತೆಗೆದುಕೊಳ್ಳುತ್ತೇನೆ ಎಂದು ನಿರ್ಣಯಿಸಿದರೆ Choice-4 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

## Choice-1 ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.

ಅ) ಸೀಟು ಹಂಚಿಕೆ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.

ಆ) ತೃಪ್ತಿಕರವಾಗಿದ್ದಲ್ಲಿ, Choice-1 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಇ) ನಂತರ ನಿಗದಿತ ಶುಲ್ಕವನ್ನು ಪಾವತಿಸುವ ಸಲುವಾಗಿ ಈ ಕೆಳಗೆ ನೀಡಿರುವ ಯಾವುದಾದರು ಒಂದು ವಿಧಾನವನ್ನು / ನಿರ್ದೇಶನಗಳನ್ನು ಪಾಲಿಸಬೆಕು.

i) KEA ವೆಬ್ ಸೈಟ್‌ನಿಂದ ಮೂರು ಪ್ರತಿಯುಳ್ಳ ಇ–ಚಲನ್ (ಬ್ಯಾಂಕ್ ಅನ್ನು ಆಯ್ಕೆ ಮಾಡಿ) ಅನ್ನು ಡೌನ್ ಲೋಡ್ ಮಾಡಿಕೊಳ್ಳಬೇಕು / ಪ್ರಿಂಟ್ ತೆಗೆದುಕೊಂಡು ಪಾವತಿಸುವ ಅಥವಾ

ii) KEA ವೆಬ್ ಸೈಟ್‌ನಿಂದ ಮೂರು ಪ್ರತಿಯುಳ್ಳ NEFT / RTGS / IMPS Challan ಅನ್ನು ಡೌನ್ ಲೋಡ್ ಮಾಡಿಕೊಳ್ಳಬೇಕು / ಪ್ರಿಂಟ್ ತೆಗೆದುಕೊಂಡು ಪಾವತಿಸುವ ಅಥವಾ

iii) ಆನ್‌ಲೈನ್ ಪಾವತಿಯ ಗೇಟ್ವೇ ಮೂಲಕ KEA ವೆಬ್‌ಸೈಟಿನಲ್ಲಿ ಸರಿಯಾದ ಲಿಂಕ್ ಅನ್ನು ಆಯ್ಕೆ ಮಾಡಿ ಮತ್ತು ನಿಗದಿತ ಶುಲ್ಕವನ್ನು ವರ್ಗಾಯಿಸಿ (ಕ್ರೆಡಿಟ್ ಕಾರ್ಡ್ / ಡೆಬಿಟ್ ಕಾರ್ಡ್ / ನೆಟ್ ಬ್ಯಾಂಕಿಂಗ್)

ಈ) ಇ–ಚಲನ್ ನಲ್ಲಿ ಅಭ್ಯರ್ಥಿಯ ಎಲ್ಲಾ ವಿವರಗಳು ಅಂದರೆ, ಅಭ್ಯರ್ಥಿಯ ಹೆಸರು, ಸಿಇಟಿ ಸಂಖ್ಯೆ, ಆಯ್ಕೆಯಾಗಿರುವ ಕಾಲೇಜು ಮತ್ತು ಕೋರ್ಸಿನ ವಿವರ, ಅಭ್ಯರ್ಥಿಯು ಪಾವತಿಸಬೇಕಾದ ಶುಲ್ಕ, ಬ್ಯಾಂಕ್ ಖಾತೆ ಸಂಖ್ಯೆ ಇವೆಲ್ಲವನ್ನೂ ಮುದ್ರಿಸಲಾಗಿರುತ್ತದೆ. ಅಭ್ಯರ್ಥಿಯು ಸರಿಯಾಗಿದೆ ಎಂದು ಪರಿಶೀಲಿಸಿ ಸಹಿ ಮಾಡಬೇಕು.

ಉ) ನಂತರ ಆಯ್ಕೆ ಮಾಡಿರುವ ಬ್ಯಾಂಕಿನ ಯಾವುದೇ ಹತ್ತಿರದ ಶಾಖೆಯಲ್ಲಿ ನಿಗದಿತ ಶುಲ್ಕವನ್ನು ಪಾವತಿಸಬೇಕು.

ಎ) ಬ್ಯಾಂಕಿನವರು ಶುಲ್ಕವನ್ನು ತೆಗೆದುಕೊಂಡ ನಂತರ ಬ್ಯಾಂಕ್ ಪ್ರತಿಯನ್ನು ತಮ್ಮೊಡನೆ ಇಟ್ಟುಕೊಂಡು, ವಿದ್ಯಾರ್ಥಿ ಪ್ರತಿ / ಕಾಲೇಜು ಪ್ರತಿಯನ್ನು ಹಿಂದಿರುಗಿಸುತ್ತಾರೆ.

ಏ) ಶುಲ್ಕ ಪಾವತಿಯಾದ ನಂತರ ಅಭ್ಯರ್ಥಿಗಳು KEA ವೆಬ್‌ಸೈಟಿನಲ್ಲಿ ಸರಿಯಾದ ಲಿಂಕ್ ಅನ್ನು ಆಯ್ಕೆ ಮಾಡಿ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿ, ಎರಡೂ ಪ್ರತಿ ಯಲ್ಲಿನ ನಿಗದಿ ಪಡಿಸಿದ ಜಾಗದಲ್ಲಿ ಅಭ್ಯರ್ಥಿಯು ಸಹಿಯನ್ನು ಮಾಡಬೇಕು. (ಅಭ್ಯರ್ಥಿಯ ಪ್ರತಿ ಮತ್ತು ಕಾಲೇಜು ಪ್ರತಿ)

ಐ) ನಂತರ ಅಭ್ಯರ್ಥಿಗಳು, ಕಾಲೇಜು ಪ್ರತಿಯ ಪ್ರವೇಶ ಪತ್ರ ಮತ್ತು ಚಲನ್ ನೊಂದಿಗೆ ಹಾಗು ಎಲ್ಲಾ ಮೂಲ ದಾಖಲೆಗಳೊಂದಿಗೆ ಪ್ರವೇಶ ಪತ್ರದಲ್ಲಿ ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗಾಗಿ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು. (ಪ್ರವೇಶ ಪತ್ರ ಮತ್ತು ಬ್ಯಾಂಕ್ ಚಲನ್ ಗಳ ಅಭ್ಯರ್ಥಿಯ ಪ್ರತಿಯನ್ನು, ಅಭ್ಯರ್ಥಿಗಳು ನಂತರದ ಉಪಯೋಗಕ್ಕಾಗಿ ತಮ್ಮೊಡನೆ ಇಟ್ಟುಕೊಳ್ಳಬೇಕು)

ಒ) ಕಾಲೇಜಿನಲ್ಲಿ ಪ್ರವೇಶ ಪಡೆದ ನಂತರ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರವೇಶ ಪಡೆದ ಬಗ್ಗೆ ದಾಖಲಿಸಬೇಕು.

Choice-2 ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.

- Choice-2 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸಕೂಡದು.
- Choice-2 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳುವಂತಿಲ್ಲ ಅಥವಾ ಕಾಲೇಜಿಗೆ ಪ್ರವೇಶವನ್ನು ಪಡೆಯುವಂತಿಲ್ಲ.
- Choice-2 ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ತಮ್ಮೊಡನೆ ಉಳಿಸಿಕೊಂಡು ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಯಾವುದೇ ಸೀಟು ಅಂದರೆ Higher Order Options ಹಂಚಿಕೆಯಾದಲ್ಲಿ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ. ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಮೊದಲ ಸುತ್ತಿನಲ್ಲಿ ಪಡೆದ ಸೀಟು ಅವರ ಬಳಿಯೇ ಇರುತ್ತದೆ.
- Higher Order Options ಅಂದರೆ, ಒಬ್ಬ ಅಭ್ಯರ್ಥಿಯು 180 ಆಪ್ಷನ್‌ಗಳನ್ನು ದಾಖಲಿಸಿದ್ದಲ್ಲಿ, ಇವುಗಳ ಪೈಕಿ ಮೊದಲನೇ ಸುತ್ತಿನಲ್ಲಿ ಅಭ್ಯರ್ಥಿಗೆ 123 ನೇ ಆಪ್ಷನ್ ನಂಬರಿಗೆ ಸೀಟು ದೊರಕಿದೆ ಎಂದು ಭಾವಿಸಿದಲ್ಲಿ, 1 ರಿಂದ 122 ನೇ ಆಪ್ಷನ್‌ಗಳ ಸೀಟುಗಳು Higher Order Options ಆಗುತ್ತದೆ. ಎರಡನೇ ಸುತ್ತಿನಲ್ಲಿ ಈ ಮೇಲಿನ ಯಾವುದೇ ಆಪ್ಷನ್‌ಗಳಿಗೆ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆಯಾದಲ್ಲಿ ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ.
- Higher Order Options ಗಳಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟು ಅಭ್ಯರ್ಥಿಯ ಹೆಸರಿನಲ್ಲಿರುತ್ತದೆ.

## Choice-3 ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.

- Choice-3 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ.
- Choice-3 ಅಭ್ಯರ್ಥಿಗಳು ಮೊದಲ ಸುತ್ತಿನಲ್ಲಿ ಆಯ್ಕೆಯಾದ ಸೀಟು ಇಷ್ಟವಿರುವುದಿಲ್ಲ.
- Choice-3 ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ರದ್ದುಪಡಿಸಿಕೊಂಡು (ತಮ್ಮೊಡನೆ ಉಳಿಸಿಕೊಳ್ಳದೆ) ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಯಾವುದೇ ಸೀಟು ಹಂಚಿಕೆಯಾದಲ್ಲಿ ಮಾತ್ರ ಅವರು ಸೀಟನ್ನು ಆಯ್ಕೆ ಮಾಡಿಕೊಳ್ಳಬೇಕು.

## Choice-4 ಅನ್ನು ಆಯ್ಕೆ ಮಾಡಿರುವ ಅಭ್ಯರ್ಥಿಗಳು

- ಅಭ್ಯರ್ಥಿಯು ತಮಗೆ ಮೊದಲ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ನನಗೆ ದೊರಕಿರುವ ಸೀಟು ಬೇಡ ಹಾಗೂ ನನಗೆ ಮುಂದಿನ ಸುತ್ತಿನಲ್ಲೂ ಸಹ ಯಾವುದೂ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ, ನಾನು ಬೇರೆ ಸಂಸ್ಥೆಯಿಂದ ಸೀಟು ತೆಗೆದುಕೊಳ್ಳುತ್ತೇನೆ ಎಂದು ನಿರ್ಣಯಿಸಿದರೆ Choice-4 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.